ನನ್ನದು ಪ್ರೇಮ ವಿವಾಹ...

ನಾನವಳನ್ನು ಮೊದಲು ನೋಡಿದ್ದು ಬೆಂಗಳೂರಿನಲ್ಲಿ ನನ್ನ ಎಂಜಿನಿಯರಿಂಗ್ ಮುಗಿಸಿ ಎಂ.ಎಸ್. ಮಾಡಲು ಅಮೆರಿಕದ ಕೊಲಂಬಿಯಾ ಯೂನಿವರ್ಸಿಟಿಗೆ ಹೋಗಬೇಕಾದಾಗ. ನನ್ನ ಜೊತೆಗೆ ಅದೇ ಯೂನಿವರ್ಸಿಟಿಗೆ ಬೆಂಗಳೂರಿಂದ ಹೊರಟವರಿದ್ದಾರೆಯೇ ಎಂದು ತಿಳಿದುಕೊಳ್ಳಲು ಆನ್‌ಲೈನ್‌ನಲ್ಲಿ ಹುಡುಕಾಡಿದಾಗ ಕಣ್ಣಿಗೆ ಬಿದ್ದ ನಾಕು ಹೆಸರುಗಳಲ್ಲಿ ಒಂದು ನಂದನಾರೆಡ್ಡಿಯದು. ಸ್ವಾತಿ, ಅನೂಪ್, ಶೈಲೇಂದ್ರ ಹೊರಡುವ ತಾರೀಕು ನನಗೆ ಮ್ಯಾಚ್ ಆಗಲಿಲ್ಲ. ಯೋಗಾಯೋಗ ಎನ್ನುವಂತೆ ನಾನೂ ನಂದನಾರೆಡ್ಡಿಯೂ ಒಂದೇದಿನ ಒಂದೇವಿಮಾನದಲ್ಲಿ ಟಿಕೆಟ್ ಕಾದಿರಿಸಿದ್ದೆವು. ಹೊರಡುವ ಎರಡು ದಿನ ಮುನ್ನ ಪರಸ್ಪರ ಭೇಟಿಯಾಗಿ ಪರಿಚಯಿಸಿಕೊಂಡಿದ್ದೆವು. ಅವಳು ಬೆಂಗಳೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿ ಎಂ.ಎಸ್.ಗಾಗಿ ಅಮೆರಿಕಕ್ಕೆ ಹೊರಟಿದ್ದರೆ, ನಾನು ಕಂಪ್ಯೂಟರ್ ಎಂಜಿನಿಯರ್, ಆ ಕ್ಷೇತ್ರದಲ್ಲಿ ಮಾಸ್ಟರ್ಸ್ ಮಾಡಲು ಹೊರಟಿದ್ದೆ.

ನಂದನಾರೆಡ್ಡಿ ಅಪರೂಪದ ಸುಂದರಿ. ಹೆಚ್ಚು ಮಾತಿನವಳಲ್ಲ. ಆಗಾಗ್ಗೆ ಮೌನದ ಮೊಗ್ಗೊಡೆದು ಮಾತುಗಳರಳುತ್ತಿದ್ದವು. ಅಂಥ ಎತ್ತರ, ಗೌರವರ್ಣ, ಲಕ್ಷಣವಾದ ಮುಖವನ್ನು ನಮ್ಮ ಕುಟುಂಬದಲ್ಲಿ ನಾನು ನೋಡೇ ಇರಲಿಲ್ಲ! ಅಥವಾ ಆಗ ಹಾಗನಿಸಿತ್ತೋ... ಅವಳ ಒಂದೇ ಒಂದು ನೋಟ ನನ್ನೆಡೆಗೆ ಬಿದ್ದರೆ ಕೃತಾರ್ಥನಾದೆ ಎನ್ನುವಂತೆ ಆ ದಿನಗಳಲ್ಲಿ ನನ್ನ ನಡೆನುಡಿ ಇತ್ತು. ಯೌವನ ಕಾಲ... ಚೆಲುವು ಒಲವುಗಳಿಗೆ ಹಾತೊರೆಯುವ ಮೈಮನ... ನನ್ನ ಜಾತಿ, ಮನೆಯ ಪರಿಸ್ಥಿತಿ, ನನಗಿರುವ ಬ್ಯಾಂಕ್ ಸಾಲ ಯಾವುದೂ ನನಗಾಗ ನೆನಪಾಗಲೇ ಇಲ್ಲ. ನಿರಂತರ ಅವಳ ಹಿಂದೆ ಸುತ್ತುತ್ತಾ ಅವಳ ಮರ್ಜಿ ಏನಿದೆಯೆಂದು ತಿಳಿಯಲು ಕಾಯುತ್ತಿದ್ದೆ. ಹಾಗೆಂದು ಅವಳ ಹಿಂದೆ ಬಿದ್ದಿದ್ದು ನಾನೊಬ್ಬನೇನಲ್ಲ! ಅವಳನ್ನು ಪಟಾಯಿಸಲು ಭಾರತೀಯ ವಿದ್ಯಾರ್ಥಿಗಳ ದಂಡೇ ಇತ್ತು! ಆದರವಳು ನನ್ನತ್ತಲೇ ಅನುರಕ್ತಳಾಗಿದ್ದಳೆಂದು ಭಾವಿಸಿ ಬೀಗುತ್ತಿದ್ದೆ. ಒಂದು ಅಮೃತ ಘಳಿಗೆಯಲ್ಲಿ ಅವಳನ್ನು ಕೇಳಿಯೂ ಬಿಟ್ಟೆ. ಡಾಮಿನೋಸ್‌ನಲ್ಲಿ ಕೆಲಸ ಮಾಡಿದ ದಿನಗೂಲಿಯನ್ನೆಲ್ಲ ಒಗ್ಗೂಡಿಸಿ ಅವಳನ್ನೊಂದು ಮೆಕ್ಸಿಕನ್ ರೆಸ್ಟೋರೆಂಟಿನ ಡಿನ್ನರಿಗೆ ಕರೆದೊಯ್ದು ಬಹಳ ಕಾವ್ಯಮಯವಾಗಿ ಪ್ರಪೋಸ್ ಮಾಡಿದೆ. ಹಾಗೆಲ್ಲ ಫಕ್ಕನೆ ಆವೇಶಕ್ಕೆ ಒಳಗಾಗುವ ಹೆಣ್ಣಲ್ಲ ಅವಳು. ಎರಡು ದಿನ ಸಮಯ ಬೇಕೆಂದಳು. ಬಹುಶಃ ಅವಳ ತಂದೆಯನ್ನು ಕೇಳಿ ಹೇಳಬೇಕೆಂದಿರಬೇಕು; ಅವಳಿಗೆ ಅಮ್ಮನಿಲ್ಲದಿರುವುದನ್ನು ತಿಳಿಸಿದ್ದಳಲ್ಲ... ಎರಡು ದಿನ ಎಂದವಳು ಒಂದೇ ದಿನಕ್ಕೆ ಕರೆ ಮಾಡಿ ಅಸ್ತು ಅಂದಳು. ನಾನಾಗ ಒಂಬತ್ತನೇ ಆಕಾಶದಲ್ಲಿ ತೇಲುತ್ತಿದ್ದೆ! ತರಗತಿ ಮುಗಿಯುತ್ತಲೇ ನೇರ ಅವಳ ರೂಮಿಗೆ ಹೋಗುತ್ತಿದ್ದೆ. ಸ್ವಲ್ಪ ಹೊತ್ತು ಮಾತಾಡಿ 'ನನಗೀಗ ಓದಿಕೊಳ್ಳುವುದಿದೆ, ಸೀಯೂ ಟುಮಾರೋ' ಎಂದು ಸಾಗಹಾಕುತ್ತಿದ್ದಳು. ಅಪ್ಪುಗೆ, ಚುಂಬನಗಳಾಚೆ ಯಾವ ಸಲಿಗೆಯನ್ನೂ ಅವಳು ಕೊಡಲಿಲ್ಲ. ಬಹುತೇಕ ಅವಳು ನೀರಸವಾಗಿಯೇ ಇರುತ್ತಿದ್ದಳು. ಒಂದು ದಿನವೂ ಉತ್ತೇಜಿತಳಂತೆ ತೋರಿಬರಲಿಲ್ಲ. ತುಂಬಾ ಸಂಯಮ ಎಂದುಕೊಂಡಿದ್ದೆ. ಹಾಗೇ ಅವಳು ಓದಿನಲ್ಲಿ ತೊಡಗಿಕೊಂಡಿದ್ದಳು. ನನಗೂ ಆಗಾಗ್ಗೆ ಎಚ್ಚರಿಸುತ್ತಿದ್ದಳು. 'ಓದಿನಲ್ಲಿ ಫೋಕಸ್ ಮಾಡು' ಅಂತ... ನನಗೂ ಅದು ಸರಿ ಅನ್ನಿಸಿತು. ನಾನು ಓದಿ ಕೆಲಸ ತೆಗೆದುಕೊಳ್ಳುವುದು ನನ್ನ ದೃಷ್ಟಿಯಿಂದ ಅನಿವಾರ್ಯವಾಗಿತ್ತು.

